◆ ನೀವು ಕಂಡ ಬೇಂದ್ರೆಯವರನ್ನು ಕುರಿತು ಹೇಳ್ತೀರಾ?

ನಾನು ಕಂಡ ಬೇಂದ್ರೆ ಅಂತ ಹೇಳುವಾಗ, ಕವಿ ಬೇಂದ್ರೆ ಮತ್ತು ವ್ಯಕ್ತಿ ಬೇಂದ್ರೆ ಅಂತ ಇಬ್ಬರಿದ್ದಾರೆ. ಕವಿ ಬೇಂದ್ರೆ ಬಗ್ಗೆ ಹೇಳುವುದು ನನ್ನ ಅಳವಿಗೆ ಮೀರಿದ್ದು. ಅದು ಅಗಾಧ ಕೊಳ. ನನ್ನ ದೃಷ್ಟಿಯಲ್ಲಿ, ಬೇಂದ್ರೆಯವರನ್ನು ಹೊರತು ಪಡಿಸಿ ಉಳಿದ ನಮ್ಮ ಕವಿಗಳನ್ನು ಒಮ್ಮೆ ಅಥವಾ ಎರಡು, ಬಹಳವಾದರೆ ಮೂರು ಸಲ ಓದಿದರೆ ಅರ್ಥವಾಗುತ್ತಾರೆ, ಅಲ್ಲಿಗೆ ಮುಗಿಯುತ್ತಾರೆ. ಆದರೆ ಬೇಂದ್ರೆ ಹಾಗಲ್ಲ. ಅವರು ಮುಗಿಯುವುದೇ ಇಲ್ಲ. ಅದು ಸ್ವತಃ ಅವರ ಕಲ್ಪನೆಗೂ ನಿಲುಕದೇ ಹೋದ ಅಗಾಧತೆಯೋ ಅಥವಾ ಅರಿಯುವವರ, ಟೀಕಿಸುವವರ, ವಿಮರ್ಶಕರ ಸೀಮಿತತೆಯೋ, ಹೇಳುವುದು ಕಷ್ಟ. ಯಾಕಂದರೆ ಬೇಂದ್ರೆ ಕಾವ್ಯ ನಿರಂತರ ಚಿಮ್ಮುವ ಹೊಸ ಜಲ, ಸೆಲೆ, ನಿತ್ಯಧಾರೆ. ಹೀಗಾಗಿ ಓದುವವರು, ವಿಮರ್ಶಿಸುವವರು ಇರುವವರೆಗೂ ಬೇಂದ್ರೆ ಕಾವ್ಯಾರ್ಥಕ್ಕೆ ನಿಲುಗಡೆಯಾಗಲಿ, ಮುಗಿವಾಗಲಿ ಇರದು.

ನಾನು ನೋಡಿದ ವ್ಯಕ್ತಿ ಬೇಂದ್ರೆ ಮತ್ತು ಆ ಮೂಲಕ ನನ್ನ ಸೀಮಿತ ಅರ್ಥಕ್ಕೆ ನಿಲುಕಿದ ಬೇಂದ್ರೆ ಬಗ್ಗೆ ಮಾತ್ರ ಸ್ವಲ್ಪ ಹೇಳುವುದು ಸೂಕ್ತವಾದೀತು. ಬೇಂದ್ರೆಯವರನ್ನು ನಾನು ಮೊದಲು ಕಂಡದ್ದು 1956ರಲ್ಲಿ. ಸೊಲ್ಲಾಪುರದಿಂದ ನಿವೃತ್ತರಾಗಿ ಬಂದಿದ್ದರು. ನಾನು ಬಾಸೆಲ್ ಮಿಶನ್ ಹೈಸ್ಕೂಲಿನಲ್ಲಿ ಕಲಿಯುತ್ತಿದ್ದೆ. ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿದ್ದೆ. ನನ್ನ ಗುರುಗಳಾದ ವರದರಾಜ ಹುಯಿಲಗೋಳರು ನಮ್ಮ ಹೈಸ್ಕೂಲಿನಲ್ಲಿ ಬೇಂದ್ರೆಯವರಿಗೆ 60 ತುಂಬಿದ ಹಬ್ಬ ಹಮ್ಮಿಕೊಂಡಿದ್ದರು. ಬೇಂದ್ರೆಯವರ ಆ ವರೆಗಿನ ಎಲ್ಲ ಕೃತಿಗಳನ್ನು ಓದಲು ಕೊಟ್ಟಿದ್ದರು. ಓದಿ ಬೇಂದ್ರೆಯವರ ಬಗ್ಗೆ ಬರೆದ ಎರಡು ಕವಿತೆಗಳನ್ನು ಆಗಸ್ಟ್ 24ರಂದು ನಡೆದ ಸಮಾರಂಭದಲ್ಲಿ ಓದಿದ್ದೆ. ಕೇಳಿದ ಅವರು, "ಛಂದ ಬರದೀ ತಮ್ಮಾ. ನೀ ನನ್ಹಾಂಗ ಬರೀಬೇಕು..." ಎಂದಿದ್ದರು. 'ನನ್ಹಾಂಗ' ಅಂದರ ಹ್ಯಾಂಗ? ಅವರ ಮಾತು ಆಶೀರ್ವಾದವೋ ಅಸಂತೋಷವೋ ಅನುಮಾನವೋ ನನಗೆ ಈವರೆಗೂ ಅರ್ಥವಾಗಿಲ್ಲ. ಇದೇ ಬೇಂದ್ರೆಯ ಅಗಾಧತೆ, ಅರ್ಥಾತೀತತೆ. ಮಂಗಳವಾರದ ಸಂತೆಯಲ್ಲಿ ಖಾದೀ ಭಾಂಡಾರದ ಮುಂಭಾಗದಲ್ಲಿ ಬೆಣ್ಣೆ ಮಾರುತ್ತಿದ್ದ ಹೆಣ್ಣುಮಕ್ಕಳ ಕೂಡ, ವಾಗ್ವಾದ ಮಾಡುತ್ತಿದ್ದ, ತಮ್ಮ ತೋರುಬೆರಳಿನಿಂದ ಅವರ ಗಡಿಗೆಯಿಂದ ಚೂರು ಬೆಣ್ಣೆ ತೆಗೆದುಕೊಂಡು, ಮೂಸಿ, ನೆಕ್ಕಿ, ಪರೀಕ್ಷಿಸುತ್ತಿದ್ದ, ತಕ್ಕಡಿಯಲ್ಲಿ ತೂಗಿಸಿಕೊಂಡು, ಕುಂಬಳ ಎಲೆಯಲ್ಲಿ ಕಟ್ಟಿಸಿಕೊಳ್ಳುತ್ತಿದ್ದ ಬೇಂದ್ರೆಯವರನ್ನು ನೋಡಿ ಆಶ್ಚರ್ಯಪಟ್ಟಿದ್ದೇನೆ. ಕಡಪಾ ಮೈದಾನದ ಮಧ್ಯದಲ್ಲಿ ಒಂದು ಎತ್ತರದ ವೇದಿಕೆಯಿತ್ತು. ಅದರ ಮೇಲೆ ನಿಂತು ಕೈ ಮೈ ಮಣಿಸುತ್ತ ಕುಣಿಸುತ್ತ ಹಾಡುತ್ತಿದ್ದ ಬೇಂದ್ರೆ ದನಿ ಈಗಲೂ ಕಿವಿಯಲ್ಲಿ ಅನುರಣಿಸುತ್ತಿದೆ. ಆಕಾಶವಾಣಿಯವರು ನಿಲಯದ ಹೊರಗಿನ ಆಲದ ಮರದ ಕೆಳಗೆ ಆಯೋಜಿಸುತ್ತಿದ್ದ ಹಲವಾರು ಕವಿಗೋಷ್ಠಿಗಳಲ್ಲಿ ಎದ್ದೆದ್ದು ಕಾಣುತ್ತಿದ್ದ ಬೇಂದ್ರೆಯವರ ಜೊತೆ ಎರಡು ಸಲ ನಾನೂ ಕಾವ್ಯವಾಚನ ಮಾಡಿದ್ದೇನೆ. 1964ರಲ್ಲಿ ಪ್ರಕಟವಾದ ನನ್ನ ಕವನ ಸಂಗ್ರಹ 'ನೀನಾ' ಕೊಡಲು ಅವರ ಮನೆಗೆ ಹೋಗಿದ್ದೆ. "ಕವಿತಾ ಹಂಗ ಕೊಡಬಾರದು, ಓದಿ ಹೇಳು" ಎಂದು 3–4 ಕವಿತೆ ಓದಿಸಿಕೊಂಡದ್ದು ಕಣ್ಣಮುಂದಿದೆ. ಶಿರಹಟ್ಟಿಯಲ್ಲಿ 1973ರ ಗಾಂಧೀಜಯಂತಿ ಕವಿಗೋಷ್ಠಿ. ಬೇಂದ್ರೆಯವರ ಅಧ್ಯಕ್ಷತೆ. ಸಂಘಟಕರು ತಮಗೆ ಹಾಕಿದ ಹೂಹಾರವನ್ನು ಆ ಗೋಷ್ಠಿಯಲ್ಲಿ ಕಿರುವಯಸ್ಸಿನವನಾಗಿದ್ದ ನನ್ನ ಕೊರಳಿಗೆ ಹಾಕಿದ್ದು ಮರೆಯಲಾರೆ. ಅವರ ಸ್ವಭಾವದ ಸಣ್ಣತನಕ್ಕೆ ನಿಖರ ಉದಾಹರಣೆಗಳಾಗಿದ್ದ ಅವರಾಡಿದ್ದ ಕೆಟ್ಟ ಬೈಗುಳಗಳನ್ನು ಕೇಳಿದ್ದೇನೆ. ಕವಿವಿ ಅವರಿಗೆ ಗೌರವ ಡಾಕ್ಟರೇಟ್ ನೀಡಿದಾಗ ಅತ್ಯಂತ ನಿರ್ಭಿಡೆ, ನಿರ್ಲಕ್ಷ್ಯ, ಅಹಂಕಾರದಿಂದ, ಇದೆಂಥಾ ಡಾಕ್ಟರೇಟು, ನಾನು ಹುಟ್ಟಿದಾಗಲೇ **DR (BENDRE)** (ಡಿಆರ್/ದರಾ) ಆಗಿದ್ದೆ, ಎಂದು ಒದರಾಡಿದಂತೆ ಮಾತಾಡಿದ್ದು ಸ್ವತಃ ಕೇಳಿದ್ದೇನೆ. ಶಂ.ಬಾ. ಜೋಶಿ ಅವರ ಕೃತಿಗೆ ಸಾಹಿತ್ಯ